**ಸಿ.ಸಿ.ನಂ.2171/2021**
**ಸಿಡಬ್ಲ್ಯು: 18 ಪಿಡಬ್ಲ್ಯು: 05**

**ಮೆಃ ಹೆಚ್ಚುವರಿ ಹಿರಿಯ ಸಿವಿಲ್ ವ ಜೆ.ಎಮ್.ಎಫ್.ಸಿ. ನ್ಯಾಯಾಲಯ ಬಸವನ-ಬಾಗೇವಾಡಿ**

| | | |
|---|---|---|
| ಸಾಕ್ಷಿದಾರರ ಹೆಸರು | : | ಗಣಪತಿ ಕುಲಕರ್ಣಿ |
| ತಂದೆ/ಗಂಡ ಹೆಸರು | : | ಪಾಂಡುರಂಗ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಎ.ಎಸ್.ಐ. |
| ವಾಸಸ್ಥಳ | : | ವಿಜಯಪುರ |

**<u>ಸಾಕ್ಷಿಯನ್ನು ಇಂದು ದಿನಾಂಕಃ 07-08-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**
**<u>ಮುಖ್ಯ ವಿಚಾರಣೆ: ಎ.ಪಿ.ಪಿ.ಯವರಿಂದ</u>**

1) 05-08-2019 ರಿಂದ 04-04-2026 ರವರೆಗೆ ಮನಗೂಳಿ ಪೋಲಿಸ ಠಾಣೆ ಎ.ಎಸ್.ಐ ಅಂತಾ ಕರ್ತವ್ಯನಿರ್ವಹಿಸಿರುತ್ತೇನೆ.

2) ದಿ:31-03-2021 ರಂದು ನಾನು ಠಾಣೆಯ ಪಿ.ಎಸ್.ಐ ರವರು ಎಚ್.ಸಿ 1511 ರವರನ್ನು ಕರೆದು ಮನಗೂಳಿ ಠಾಣಾ ಗುನ್ನಾ ನಂ.49/2021 ನೇದ್ದರ ಅಡಿಯಲ್ಲಿ ಶ್ರೀನಿವಾಸ ಗುಪ್ತಾ ಕೆ.ಎಲ್.ಈ ಆಸ್ಪತ್ರೆಯಲ್ಲಿ ಮೃತ ಪಟ್ಟಿದ್ದರು. ಅವನ ಶವ ಪಂಚನಾಮೆ ಮಾಡಿಕೊಡುವಂತೆ ಸೂಚಿಸಿದ ಪ್ರಕಾರ ದಿ:01-04-2021 ರಂದು ನಾನು ಹಾಗೂ ಎಚ್.ಸಿ 1511 ಕೆ.ಎಲ್.ಈ ಆಸ್ಪತ್ರೆ ಬೆಳಗಾವಿಗೆ ಹೋಗಿ ಶ್ರೀನಿವಾಸ ಗುಪ್ತಾರವರ ಶವ ಪಂಚನಾಮೆ ಮಾಡಿ ಸಾಕ್ಷಿದಾರರ ಚಾಸಾ-10 ರಿಂದ 13 ರವರ ಹೇಳಿಕೆಯನ್ನು ಪಡೆದುಕೊಂಡು ಪೋಸ್ಟ ಮಾಸ್ಟಮ ಪರೀಕ್ಷೆ ಕುರಿತು ಚಾಸಾ-17 ರವರಿಗೆ ವಹಿಸಿಕೊಟ್ಟಿರುತ್ತೆನೆ.

3) ಈಗ ನಾನು ನೋಡುತ್ತಿರುವ ದಾಖಲೆ ಶವ ಪಂಚನಾಮೆ ಆಗಿದ್ದು , ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

4) ನಿಪಿ-3 ಮತ್ತು 4 ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

5) ನಾನು ಕೆ.ಎಲ್.ಈ ಆಸ್ಪತ್ರೆ ಹೋಗಿ ಶವ ಪಂಚನಾಮೆ ಜರುಗಿಸಿದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.. ನಾನು ಯಾವುದೇ ರೀತಿಯ ಹೇಳಿಕೆಯನ್ನು ಪಡೆದುಕೊಳ್ಳದೆ ಇದ್ದರೂ ಸಹ ಮೃತರ ಕುಟಂಬಕ್ಕೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.